# ಕೆವಿನ್ ಮತ್ತು ಕ್ರೇಜಿ ರಿಚ್ ಏಷ್ಯನ್ಸ್!






ಜಗತ್ತಿನಲ್ಲಿಯೇ ಅತ್ಯಧಿಕ ಪ್ರತಿಗಳು ಮಾರಾಟಗೊಂಡ ಕೃತಿಗಳಲ್ಲಿ ಸಿಂಗಪುರ ಮೂಲದ ಅಮೆರಿಕನ್ ಲೇಖಕ ಕೆವಿನ್ ಕ್ವಾನ್ ಅವರ ‘ಕ್ರೇಜಿ ರಿಚ್ ಏಷ್ಯನ್ಸ್’ ಕೂಡ ಒಂದು. ಕೆವಿನ್ ಅವರನ್ನು ಈ ಶ್ರೀಮಂತಿಕೆ ಎಷ್ಟೊಂದು ಕಾಡಿದೆ ಎಂದರೆ ‘ಚೀನಾ ರಿಚ್ ಗರ್ಲ್‌ಫ್ರೆಂಡ್’ ಮತ್ತು ‘ರಿಚ್ ಪೀಪಲ್ ಪ್ರಾಬ್ಲಮ್ಸ್’ ಎಂಬ ಮತ್ತೆರಡು ಕೃತಿಗಳು ‘ರಿಚ್’ ಸರಣಿಯಲ್ಲಿ ಅವರಿಂದ ಬಂದಿವೆ. ಈಗ ‘ಸೆಕ್ಸ್ ಆ್ಯಂಡ್ ವ್ಯಾನಿಟಿ’ ಎಂದು ಜಪಿಸುತ್ತಿರುವ ಕೆವಿನ್, ಕಳೆದ ವಾರ ಆನ್‌ಲೈನ್‌ನಲ್ಲಿ ನಡೆದ ಜೈಪುರ ಸಾಹಿತ್ಯ ಸಮ್ಮೇಳನದಲ್ಲೂ ಪಾಲ್ಗೊಂಡಿದ್ದರು.

ಅಕ್ಷರಕೃಷಿ ಅವರಿಗೆ ಅದೆಂತಹ ಮಾನ್ಯತೆಯನ್ನು ತಂದುಕೊಟ್ಟಿದೆ ಎಂದರೆ ತಾವು ಬರೆದ ಪುಸ್ತಕ ಮಾರಾಟದಿಂದಲೇ ಐಷಾರಾಮಿ ಬದುಕನ್ನು ಕಟ್ಟಿಕೊಳ್ಳಲು ಅವರಿಗೆ ಸಾಧ್ಯವಾಗಿದೆ. ಅಂದರೆ ಅವರೀಗ ‘ರಿಚ್’ ಆಗಿದ್ದಾರೆ! ಅಂದಹಾಗೆ, ‘ಕ್ರೇಜಿ ರಿಚ್ ಏಷ್ಯನ್ಸ್’ ಕೃತಿ ಪ್ರಪಂಚದ 30 ಭಾಷೆಗಳಿಗೆ ಅನುವಾದಗೊಂಡಿದೆ. ‘ನ್ಯೂಯಾರ್ಕ್ ಟೈಮ್ಸ್’ನ ಬೆಸ್ಟ್ ಸೆಲ್ಲರ್‌ಗಳ ಪಟ್ಟಿಯಲ್ಲಿ ಮೊದಲ ಮೂರು ಕ್ರಮಾಂಕದಲ್ಲಿ ಈ ಕೃತಿ ಸ್ಥಾನ ಪಡೆದಿದ್ದು ಸುಮ್ಮನೆಯೇ ಮತ್ತೆ? ಇದೇ ಹೆಸರಿನ, ಇದೇ ಕೃತಿ ಆಧರಿತ ಹಾಲಿವುಡ್ ಸಿನಿಮಾ ಕೂಡ ದೊಡ್ಡ ಯಶಸ್ಸನ್ನು ಗಳಿಸಿದೆ. ಜಗತ್ತಿನ ಅತ್ಯಂತ ಪ್ರಭಾವಿ ನೂರು ವ್ಯಕ್ತಿಗಳಲ್ಲಿ ಕೆವಿನ್ ಕೂಡ ಒಬ್ಬರು ಎಂದು ‘ಟೈಮ್’ ಪತ್ರಿಕೆ ಹೆಸರಿಸಿದೆ.

ಸಿಂಗಪುರದಲ್ಲಿ ಜನಿಸಿದ ಕೆವಿನ್, ಹನ್ನೊಂದನೇ ವಯಸ್ಸಿನಲ್ಲಿ ಪಾಲಕರೊಂದಿಗೆ ಅಮೆರಿಕದ ಟೆಕ್ಸಾಸ್‌ಗೆ ವಲಸೆ ಹೋದವರು. ಬಹುಕಾಲದ ಬಳಿಕ ಏಷ್ಯಾಕ್ಕೆ ಹಿಂದಿರುಗಿದಾಗ ತಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರು ಎಷ್ಟು ಶ್ರೀಮಂತರಾಗಿದ್ದಾರೆ ಎಂಬುದು ಅರಿವಿಗೆ ಬಂದಾಗ ಅವರಿಗೆ ಗಾಬರಿ ಆಯಿತಂತೆ. ಅರೆರೆ, ಅದು ಹೇಗೆ ಇವರ ಸಂಪತ್ತು ನಿರಂತರವಾಗಿ ಹೆಚ್ಚುತ್ತಿದೆ, ಅದು ಹೇಗೆ ಸ್ಥಾನಮಾನ ಉನ್ನತ ಸ್ತರಕ್ಕೆ ಏರುತ್ತಲೇ ಇದೆ ಎಂದು ತಲೆ ಕೆರೆದುಕೊಂಡರಂತೆ. ಈ ಮಧ್ಯೆ ಅಮೆರಿಕದಲ್ಲಿ ನಮ್ಮದು ಮಧ್ಯಮವರ್ಗದ ಕುಟುಂಬವಾಗಿಯೇ ಉಳಿದಿದೆಯಲ್ಲ ಎಂದೂ ಯೋಚಿಸಿದರಂತೆ. ಅದರ ಫಲವೇ ‘ಕ್ರೇಜಿ ರಿಚ್ ಏಷ್ಯನ್ಸ್’. ಹಾಸ್ಯದ ಧಾಟಿಯಲ್ಲಿ ಸಾಗುವ ನಿರೂಪಣೆ ಪುಟ ಪುಟದಲ್ಲೂ ನಗೆ ಉಕ್ಕಿಸುವುದರಿಂದ ಆ ಕೃತಿ ಬಿಸಿ ಬಿಸಿ ಮಸಾಲೆ ದೋಸೆಯಂತೆ ಖರ್ಚಾಗಿರುವುದರಲ್ಲಿ ಅಚ್ಚರಿಯಿಲ್ಲ.

ವರ್ಗ ತಾರತಮ್ಯ, ವರ್ಣಭೇದ ನೀತಿ ಮತ್ತು ಜನರ ಗುರುತುಗಳ ಅತ್ಯಂತ ಸೂಕ್ಷ್ಮ ಪರಿಶೋಧನೆಯಿಂದ ಅರಳಿದ ಕೃತಿ ಇದು ಎನ್ನುವುದು ವಿಮರ್ಶಕರು ಮಾಡಿರುವ ವ್ಯಾಖ್ಯಾನ. ಕೆವಿನ್, ಕ್ಯಾನ್ಸರ್ ಪೀಡಿತ ತಂದೆಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವಾಗ ಅವರು ಹೇಳುತ್ತಿದ್ದ ಕಥೆಗಳು ಈ ಕೃತಿಗೆ ಸರಕಾಗಿವೆಯಂತೆ. ಅವರ ಕುಟುಂಬದ ಸದಸ್ಯರು, ಸ್ನೇಹಿತರು ಸಹ ಇಲ್ಲಿನ ಪಾತ್ರಗಳಾಗಿದ್ದಾರೆ. ಅವರ ಸಂಪ್ರದಾಯಗಳು, ಆಚರಣೆಗಳು, ಪಾರ್ಟಿಗಳು, ಜೀವನವಿಧಾನಗಳು ಕಥೆಯನ್ನು ಕೈಹಿಡಿದು ಮುನ್ನಡೆಸಿಕೊಂಡು ಹೋಗಿವೆ.

ಕೆವಿನ್, ಅಮೆರಿಕಕ್ಕೆ ವಲಸೆ ಹೋಗುವ ಮುಂಚೆ ಸಿಂಗಪುರದ ಪ್ರತಿಷ್ಠಿತ ಆಂಗ್ಲೊ–ಚೈನೀಸ್ ಶಾಲೆಯಲ್ಲಿ ಓದುತ್ತಿದ್ದರು. ಆ ಶಾಲೆಯ ಬಹುತೇಕ ಮಕ್ಕಳು ಬೆಂಜ್ ಕಾರುಗಳಲ್ಲೇ ಬರುತ್ತಿದ್ದರಂತೆ. ಅವರ ಮುಂಗೈಗಳಲ್ಲಿ ಯಾವಾಗಲೂ ಬೆಲೆಬಾಳುವ ವಾಚುಗಳು ಬೇರೆ. ‘ಸಿರಿವಂತಿಕೆ ಏನೂ ನನಗೆ ಹೊಸತಾಗಿರಲಿಲ್ಲ. ಆದರೆ, ಅದರ ಈ ಪಾಟಿ ಪ್ರದರ್ಶನ ನನ್ನನ್ನು ಕಂಗೆಡಿಸಿತ್ತು’ ಎಂದು ನಗುತ್ತಾ ಹೇಳುತ್ತಾರೆ ಕೆವಿನ್.

ಒಮ್ಮೆ ಕೆವಿನ್ ಅವರ ಶಾಲೆಯ ವಿದ್ಯಾರ್ಥಿಗಳ ವಿಷಯವಾಗಿ ಪತ್ರಿಕೆಯೊಂದರಲ್ಲಿ ‘ಲಿಟಲ್ ಹಾರರ್ಸ್ ಆಫ್ ಎಸಿಎಸ್’ ಎಂಬ ವರದಿ ಪ್ರಕಟವಾಗಿತ್ತಂತೆ. ಅದನ್ನು ನೋಡಿ, ಶಾಲಾ ಅಸೆಂಬ್ಲಿಯಲ್ಲಿ ಪ್ರಾಚಾರ್ಯರು ಗಳಗಳನೇ ಅತ್ತಿದ್ದರಂತೆ. ‘ನಮ್ಮೂರಿನ ಜನರಿಗೆ ಪ್ರತಿಷ್ಠೆ ಅಷ್ಟೊಂದು ಮುಖ್ಯವಾದ ಪ್ರಶ್ನೆಯಾಗಿತ್ತು. ಇಂತಹ ನನ್ನ ಬಾಲ್ಯದ ನೆನಪುಗಳು ಕಥೆಗೆ ಜೀವ ತುಂಬಿವೆ’ ಎಂದು ಅವರು ಸ್ಮರಿಸುತ್ತಾರೆ.

ಪತ್ರಕರ್ತೆಯಾಗಿದ್ದ ಕೆವಿನ್ ಅವರ ಚಿಕ್ಕಮ್ಮ, ಅವರಿಗೆ ಓದಿನ ರುಚಿ ತೋರಿಸಿದರಂತೆ. ಭಾರತದ ಕುರಿತು ಆಸಕ್ತಿ ಬೆಳೆಯಲು ಸಹ ಚಿಕ್ಕಮ್ಮನೇ ಕಾರಣ ಎಂದು ಅವರು ಹೇಳುತ್ತಾರೆ. ಕೆವಿನ್‌ಗೆ ಬೇರೆ ಏನು ಆಸಕ್ತಿ ಇದೆ? ಡಿಸೈನಿಂಗ್ ಕ್ಷೇತ್ರದಲ್ಲಿ ತರಬೇತಿಯನ್ನು ಪಡೆದಿರುವ ಅವರು, ಗ್ರಾಫಿಕ್ ಡಿಸೈನಿಂಗ್‌ನಲ್ಲೂ ಹೆಸರು ಮಾಡಿದ್ದಾರೆ. ನ್ಯೂಯಾರ್ಕ್ ಟೈಮ್ಸ್, ಟೆಡ್‌ನಂತಹ ಪ್ರತಿಷ್ಠಿತ ಸಂಸ್ಥೆಗಳನ್ನು ಕ್ಲೈಂಟ್‌ಗಳಾಗಿ ಹೊಂದಿದ್ದಾರೆ.

‘ಹೌದು, ಇದುವರೆಗೆ ‘ಕ್ರೇಜಿ ರಿಚ್ ಏಷ್ಯನ್ಸ್’ನ ಎಷ್ಟು ಕೃತಿಗಳು ಮಾರಾಟವಾಗಿವೆ’ ಎಂದು ಕೆವಿನ್ ಅವರನ್ನು ಕೇಳಿದರೆ, ಅವರೊಮ್ಮೆ ಕಣ್ಣು ಮಿಟುಕಿಸುತ್ತಾರೆ. ‘ಕಳೆದ ತಿಂಗಳು ನನ್ನ ಮ್ಯಾನೇಜರ್ ಕೊಟ್ಟ ಲೆಕ್ಕದ ಪ್ರಕಾರ, 50 ಲಕ್ಷ ಪ್ರತಿಗಳು ಮಾರಾಟವಾಗಿವೆ, ಇನ್ನೂ ಆಗುತ್ತಲೇ ಇವೆ. ನನ್ನ ವೆಬ್‌ಸೈಟ್‌ನಲ್ಲಿ ಈ ಲೆಕ್ಕಾಚಾರವನ್ನು ಅಪ್‌ಡೇಟ್ ಮಾಡುತ್ತೇನೆ ನೋಡಿ’ ಎಂದು ಉತ್ತರಿಸುತ್ತಾರೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65